ಅನಂತ ಸ್ವಭಾವದಿಂದ ಪರಿಪೂರ್ಣತೆ ಸಾಧ್ಯ

ಬೀಜವು ಒಂದು ಮರವಾಗುತ್ತದೆ. ನಂತರ ಮರವು ಒಂದು ಬೀಜವಾಗುತ್ತದೆ. ಆದ್ದರಿಂದ ಒಂದು ಬೀಜದ ಪರಿಪೂರ್ಣತೆ, ಮತ್ತೆ ಬೀಜವಾಗುವುದರಲ್ಲಿದೆ. ಬೀಜವು ಮರವಾಗಿ, ಆ ಮರವು ಹಣ್ಣು ಬಿಡದ ತನಕ ಬೀಜವು ಪೂರ್ಣವಾಗಿಲ್ಲ. ಒಂದು ಬೀಜದಿಂದ ಮತ್ತೊಂದು ಬೀಜದವರೆಗೆ ಇಡೀ ಪಯಣ. ಒಂದರಿಂದ ಆರಂಭವಾಗಿ ಅನೇಕ ಬೀಜಗಳಾಗುತ್ತವೆ. ಅದೇ ರೀತಿಯಾಗಿ ಮಾನವ ಜೀವನವು ತನ್ನ ಅನಂತ ಸ್ವಭಾವವನ್ನು ಕಂಡುಕೊಂಡಾಗ ತನ್ನ ಪರಿಪೂರ್ಣತೆಯನ್ನು ಕಂಡುಕೊಳ್ಳುತ್ತದೆ. 'ನಾನು ಕೇವಲ ದೇಹವಲ್ಲ; ನಾನು ಈ ದೇಹಕ್ಕಿಂತಲೂ ಹೆಚ್ಚು. ನಾನು ಕೇವಲ ಒಂದು ವ್ಯಕ್ತಿಯಲ್ಲ, ಅದಕ್ಕಿಂತಲೂ ಹೆಚ್ಚು' ಎಂದು ಅರಿತಾಗ ಮಾತ್ರ ಪೂರ್ಣತೆಯುಂಟಾಗಲು ಸಾಧ್ಯ. ಈ ಅರಿವು ಬರುವವರೆಗೂ ಆಂತರ್ಯದಲ್ಲಿ ಚಡಪಡಿಕೆಯಿರುತ್ತದೆ. ಈ ಪರಿಪೂರ್ಣತೆಯನ್ನು ಈ ಮೂರು ವಿಷಯಗಳಿಂದ ಪಡೆಯಬಹುದು. 1.ಅರಿವು, ಬೋಧೆ ; 2.ಮಿಲನ, ಯೋಗ ಮತ್ತು 3.ಪ್ರೇಮ. ಮಾನವ ಜೀವನದ ಪೂರ್ಣ ಸಾಮರ್ಥ್ಯವನ್ನು ಇವುಗಳಿಂದ ಕಂಡುಕೊಳ್ಳಬಹುದು. ಅರಿವು ಎಂದರೆ ಎಲ್ಲವೂ ಒಂದು ಕನಸು ಎಂಬ ತಿಳಿವಳಿಕೆಯನ್ನು ಹೊಂದಿರುವುದು. ಎಚ್ಚೆತ್ತುಕೊಂಡು ಎಲ್ಲವೂ ಒಂದು ಕನಸಿನಂತೆಯೇ ಇದೆ ಎಂದು ಅರಿಯಿರಿ. 'ನಾನು ಏನೂ ಅಲ್ಲ, ನನಗೇನೂ ಬೇಕಿಲ್ಲ, ನಾನು ಎಲ್ಲರಿಗೂ ಸೇರಿದವನಾಗಿದ್ದೇನೆ/ಸೇರಿದವಳಾಗಿದ್ದೇನೆ, ನಾನೇ ಎಲ್ಲರೂ ಎಂದು ಅರಿವೆ ಬೋಧೆ. ಮಿಲನವನ್ನು, ಯೋಗವನ್ನು ಮಾತಿನಿಂದ ವ್ಯಕ್ತಪಡಿಸಲು ಸಾಧ್ಯವಿಲ್ಲ. ಅದನ್ನು ಅನುಭವಿಸಬೇಕಷ್ಟೇ. ಎಲ್ಲವೂ ಒಂದೇ ಮತ್ತು ನಾನು ಅದೇ ಎಂದು ಅರಿಯುವುದೇ ಯೋಗ. ಪ್ರೇಮವನ್ನು ಮಾತಿನಿಂದ ಬಂಧಿಸಲು ಅಸಾಧ್ಯ. ಪ್ರೇಮವು ನಮ್ಮ ನಿಜ ಸ್ವರೂಪ. ಅದೊಂದು ಭಾವನೆಯಲ್ಲ. ಪ್ರೇಮವು ಒಂದು ಭಾವನೆಯೆಂದು ತಪ್ಪಾಗಿ ಅರ್ಥ ಮಾಡಿಕೊಂಡಿದ್ದೇವೆ. ಆದ್ದರಿಂದ ಜನರು ಅದರಲ್ಲಿ ಸಿಲುಕಿಕೊಳ್ಳುತ್ತಾರೆ. ನಮ್ಮ ಜೀವನದತ್ತ ಹಿಂದಿರುಗಿ ನೋಡಿ. ನಿಮ್ಮದೆ ಜನನದ ನೆನಪು ನಿಮಗಿದೆಯೇ ಇಲ್ಲ! 'ನೀವು ನಿಜವಾಗಿ ಜನಿಸಿದಿರೆ?' ಎಂದು ಯಾರಾದರೂ ಕೇಳಿದರೆ, ನಿಮಗೆ ಗೊತ್ತಿಲ್ಲ! *-ರವಿಶಂಕರ್ ಗುರೂಜಿ*

ವಿಚಾರ ಬಿಂದು: **ಜಗತ್ತಿನಲ್ಲಿ ಎಲ್ಲವೂ ನನ್ನ ವಿರುದ್ಧವಾಗಿವೆ ಎಂದು ಅನ್ನಿಸತೊಡಗಿದಾಗ ವಿಮಾನವನ್ನು ಕಲ್ಪಿಸಿಕೊಳ್ಳಿ. ಅದು ಗಾಳಿಯ ದಿಕ್ಕಿನಲ್ಲಿ ಹಾರುವುದಿಲ್ಲ. ಗಾಳಿಗೆ ವಿರುದ್ಧವಾಗಿ ಹಾರುತ್ತದೆ.** **-ಶುಭ ನುಡಿ**

ದೇಶಕ್ಕೆ ಮಹತ್ವದ್ದಾದ ಕೆಲಸ ಮಾಡಬಲ್ಲವನೇ ಜೀವಂತವಾಗಿರಬಲ್ಲನು

ಇಂದು (ಅ.12) ಲೋಹಿಯಾ ಪಂಚಭೂತಗಳಲ್ಲಿ ಲೀನವಾದ ದಿನ: ತನ್ನಿಮಿತ್ತ ಲೇಖನ



ಯುದ್ಧಮುಖಿಯಾಗಿರುವ ವಿಶ್ವಕ್ಕೆ, ಬಂಡವಾಳಿಗಳ ಪಾಲಾಗುತ್ತಿರುವ ವಿಶ್ವದ ಪ್ರಕೃತಿ ಪರಿಸರದ ಸಂಪನ್ಮೂಲ ರಕ್ಷಣೆಗೆ, ದೇಶಿ ಭಾಷೆಗಳ ಉಳಿವಿಗೆ, ನಮ್ಮ ಸಂಸ್ಕೃತಿಯ ಸಂರಕ್ಷಣೆಗೆ, ನೆಲಮಟ್ಟದ ಜನ ಜೀವನದ ಸಂವರ್ಧನೆಗೆ ಗಾಂಧಿ ಮತ್ತು ಲೋಹಿಯಾ ಚಿಂತನೆಗಳು ತುಂಬಾ ಅನಿವಾರ್ಯವಾಗಿವೆ. ಪ್ರಜ್ಞಾವಂತ ಮನಸ್ಸುಗಳು, ಮಾನವ ಪ್ರೇಮಿಗಳು, ನಿಜವಾದ ಪರಿಸರಪ್ರೇಮಿಗಳು ಈ ದಿಕ್ಕಿನಲ್ಲಿ ಗಂಭೀರವಾಗಿ ಚಿಂತಿಸಬೇಕು.

'**ನಾ**ನು ಅಹಿಂಸೆಯ ತತ್ವಕ್ಕೆ ಬದ್ಧನಾಗಿದ್ದೇನೆ. ಆದರೆ ನಾವು ಹೋರಾಡಿಯೇ ಸ್ವಾತಂತ್ರ್ಯ ಪಡೆಯಲಿದ್ದೇವೆ. ಗುಲಾಮಗಿರಿಯ ಸರಪಳಿಯನ್ನು ಕಿತ್ತೆಸೆಯುವುದಕ್ಕಾಗಿ ಸಾಯಲು ಸಿದ್ಧರಿದ್ದವರಿಗೆ ಮಾತ್ರ ಬದುಕುವ ಕಲೆ ಗೊತ್ತಿರುತ್ತದೆ. ಇಂದು ಸ್ವಾತಂತ್ರ್ಯ ಪಡೆದೇ ತೀರುತ್ತೇವೆಂದು ಪ್ರತಿಜ್ಞೆ ಮಾಡಿರಿ. ಸ್ವಾತಂತ್ರ್ಯ ಪಡೆಯದಿದ್ದರೆ ಸಾಯುತ್ತೇವೆಂದು ತೀರ್ಮಾನಿಸಿ. ಸ್ವಾತಂತ್ರ್ಯ ಹೇಡಿಗಳಿಗಾಗಿ ಅಲ್ಲ. ಮಹತ್ವದ ಕೆಲಸ ಮಾಡಬಲ್ಲವನೇ ಜೀವಂತವಾಗಿರಬಲ್ಲನು'. 1942ರ ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರಾಡಿದ ಮಾತುಗಳು ರಾಮ ಮನೋಹರ ಲೋಹಿಯಾ ಅವರ ಮನದ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿದವು. ಅಂದಿನಿಂದ ಲೋಹಿಯಾ ಹೋರಾಟದ ದಿಕ್ಕು ಬದಲಾಯಿತು. ಬಿಳಿಯರ ವಿರುದ್ಧ ಭೂಗತ ಚಳವಳಿ ಪ್ರಾರಂಭವಾಯಿತು. ಮನುಷ್ಯ ಜೀವನಕ್ಕೆ ಹಾನಿಯಾಗದಂತೆ ಭೂಗತ ಆಂದೋಲನ ನಡೆಯುವಂತೆ ಲೋಹಿಯಾ ಕಾರ್ಯಕ್ರಮವನ್ನು ರೂಪಿಸಿದರು. ಬಂಡಾಯದ ಕಾನೂನು ಬಾಹಿರ ಪತ್ರಿಕೆಗಳು ಪ್ರಕಟವಾಗಿ ಪ್ರಸಾರವಾದವು. ಕ್ರಾಂತಿಯ ಜ್ವಾಲೆಗಳು ಆಕಾಶವನ್ನು ಚುಂಬಿಸಲಾರಂಭಿಸಿದವು.



ತಿರುಪತಿಹಳ್ಳಿ ಶಿವಶಂಕರಪ್ಪ, ಹಾಸನ.
ಮೊ : 9986057594

ನೆನಪು ನಮ್ಮೊಡನಿದೆ

ಲೋಹಿಯಾ ಅವರು ಇಂದು ನಮ್ಮೊಡನಿಲ್ಲ. ಅವರ ಭೌತಿಕ ಶರೀರ ಪಂಚಭೂತಗಳಲ್ಲಿ ಲೀನವಾಗಿ ಇದೇ ಅಕ್ಟೋಬರ್ 12ಕ್ಕೆ ಐವತ್ತು ವರ್ಷಗಳಾಗುತ್ತದೆ. ಆದರೆ ಅವರ ನೆನಪು ನಮ್ಮೊಡನಿದೆ. ಅವರ ಮಾನವೀಯ ಪ್ರೀತಿ. ಅವರಲ್ಲಿದ್ದ ಅಗಾಧವಾದ ಸ್ವಾತಂತ್ರ್ಯ ಪ್ರೇಮ, ಲಾಹೋರ್ ಕೋಟೆಯ ಜೈಲಿನಲ್ಲಿ ಅವರು ಬ್ರಿಟೀಷರಿಂದ ಅನುಭವಿಸಿದ ಘೋರವಾದ ಶಿಕ್ಷೆ, ಅದನ್ನು ಸಹಿಸಿಕೊಂಡು ಬದುಕಿ ಉಳಿದ ಬಗೆಯನ್ನು ನೆನೆದರೆ ರೋಮಾಂಚನವಾಗುತ್ತದೆ. ಲೋಹಿಯಾ ಸಾಮಾನ್ಯವಾದ ವ್ಯಕ್ತಿಯಲ್ಲ. ದೇಶದ ಅದಮ್ಯವಾದ ಚೇತನ ಶಕ್ತಿ ಎಂಬುದು ಅವರ ಜೀವನ ಚರಿತ್ರೆಯನ್ನು ಓದಿದ ಯಾರಿಗೂ ಅರ್ಥವಾಗುತ್ತದೆ.

ಲೋಹಿಯಾ ಅಂದರೆ ಕಬ್ಬಿಣ

ಹಿಂದಿಯಲ್ಲಿ ಲೋಹಿಯಾ ಅಂದರೆ ಕಬ್ಬಿಣ ಎಂದರ್ಥ. ಲೋಹಿಯ ಕಬ್ಬಿಣದ ವ್ಯಾಪಾರಿಗಳ ಮನೆತನದಲ್ಲಿ ಹುಟ್ಟಿದವರು. ಶ್ರೀಮಂತವಾದ ಪರಂಪರೆಯ ವಂಶದವರು. ಹಾಗೆಯೇ ದಯಾಳುಗಳು ಕೂಡ. ಅವರ ದಯಾಳುತನವೇ ಅವರ ಮನೆತನಕ್ಕೆ ಮುಳುವಾಯಿತೇನೋ. ವಿಧಿಯ ಕ್ರೌರ್ಯಕ್ಕೆ ಮನೆತನದವರು ಬೆಚ್ಚಿ ಬಿದ್ದು ದಿಕ್ಕಾ ಪಾಲಾದರು. ಲೋಹಿಯಾ ಹುಟ್ಟಿದ್ದು ಅಯೋಧ್ಯೆಯಲ್ಲಿ. ಲೋಹಿಯಾ ತಂದೆ ಹಿರಾಲಾಲರು ಮಗನಿಗೆ ರಾಮ ಮನೋಹರ ಎಂದು ಹೆಸರಿಟ್ಟರು. ತಾಯಿ ಚಂದಾ. ಮಗ ಹುಟ್ಟಿದ ಎರಡೂವರೆ ವರ್ಷದೊಳಗೆ ಅಕಾಲ ಮರಣಿಯಾದರು. ಲೋಹಿಯಾ ಬೆಳೆದದ್ದು ಅಜ್ಜಿಯ ಆಶ್ರಯದಲ್ಲಿ. ಯೌವನವಿದ್ದರೂ ಹಿರಾಲಾಲರು ಮತ್ತೆ ಮದುವೆಯಾಗಲಿಲ್ಲ. ಮಗನ ವಿದ್ಯೆಗಾಗಿ ಮುಂಬೈಗೆ ಬಂದು ನೆಲೆಸಿದರು. ಕಬ್ಬಿಣದ ಸಣ್ಣ ವ್ಯಾಪಾರ ವೃತ್ತಿ ನಿರತರಾದರು.

ಗಾಂಧೀಜಿ ಹೊಸ ಸಂಚಲನ

1920 ಭಾರತದ ಸ್ವಾತಂತ್ರ್ಯದ ಇತಿಹಾಸದಲ್ಲಿ ಸಂಕ್ರಮಣದ ವರ್ಷ. ಮಹಾತ್ಮ ಗಾಂಧೀಜಿಯ ರಾಜಕೀಯ ಗುರು ಲೋಕಮಾನ್ಯ ತಿಲಕರು ಆಗಸ್ಟ್ ತಿಂಗಳಿನಲ್ಲಿ ನಿಧನರಾದರು. ಅದೇ ವರ್ಷ ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದರು. ಗಾಂಧೀಜಿ ಬರುತ್ತಲೇ ಭಾರತದ ರಾಜಕೀಯ ಹೋರಾಟಕ್ಕೆ ಹೊಸ ಸ್ವರೂಪವನ್ನು ನೀಡಿದರು. ವಿದೇಶಿ ವಸ್ತುಗಳ ಬಹಿಷ್ಕಾರ, ಖಾದಿಯ ಪ್ರಚಾರ, ಅಸಹಕಾರ, ಅಹಿಂಸೆಯ ಹೋರಾಟದ ಮೂಲಕ ಗಾಂಧೀಜಿ ಹೊಸ ಸಂಚಲನವನ್ನೇ ಸೃಷ್ಟಿಸಿದರು.

ಪ್ರಭಾವ ಬೀರಿತು

ಹಿರಾಲಾಲರು ಗಾಂಧೀಜಿಯ ಅಭಿಮಾನಿಯಾದರು, ಅನುಯಾಯಿಯಾದರು. ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮ ಜೀವನವನ್ನು ಮುಡುಪಿಟ್ಟರು. ಬಾಲಕ ಲೋಹಿಯ ತಂದೆಯ ದೇಶಪ್ರೇಮದಿಂದ ಪ್ರಭಾವಿತರಾದರು. ತಮ್ಮ ಹದಿನಾರನೇ ವರ್ಷದಲ್ಲೇ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಸ್ವಾತಂತ್ರ್ಯ ಹೋರಾಟದೆಡೆಗೆ ಸೆಳೆತಂದರು.

ಲೋಹಿಯ ಅವರು ಪದವಿ ಶಿಕ್ಷಣವನ್ನು ಕೊಲ್ಕತ್ತಾದಲ್ಲಿ ಮುಗಿಸಿದರು. ಅದು ಬ್ರಿಟೀಷರ ಆಡಳಿತಕ್ಕೆ ಒಳಪಟ್ಟ ಕಾಲೇಜಿನಲ್ಲಿ ಅಲ್ಲ. ವಿದ್ಯಾಸಾಗರ್ ಕಾಲೇಜಿನಲ್ಲಿ. ಇಲ್ಲಿನ ಬಹುತೇಕ ಅಧ್ಯಾಪಕರ ವಿಚಾರಧಾರೆ ರಾಷ್ಟ್ರೀಯ ಪ್ರೇಮದಿಂದ ಕೂಡಿತ್ತು. ಅದರ ಪ್ರಭಾವ ಲೋಹಿಯಾ ಮೇಲೂ ಆಯಿತು.

ರಾಷ್ಟ್ರಪ್ರೇಮದ ಸಂಕೇತ

ಲೋಹಿಯಾ ಬುದ್ಧಿವಂತ ವಿದ್ಯಾರ್ಥಿ. ಸೂಕ್ಷ್ಮಮತಿ. ಯಾವುದೇ ಭಾಷೆಯ ಅಂತರಂಗದಲ್ಲಿ ಕುಳಿತು ಕಲಿಯುವ ಕುಶಾಗ್ರಮತಿ. ಲೋಹಿಯಾ ಬಂಗಾಳದಲ್ಲಿ ಬೆಳೆದರು. ಇಂಗ್ಲಿಷ್ ಭಾಷೆಯನ್ನು ನಿರರ್ಗಳವಾಗಿ ಬಳಸುವ ಕಲೆಯನ್ನು ಕರಗತ ಮಾಡಿಕೊಂಡರು. ಒಳ್ಳೆ ಭಾಷಣಕಾರರಾದರು. ತರ್ಕಬದ್ಧವಾಗಿ ವಿಚಾರವನ್ನು ಮಂಡಿಸುತ್ತಿದ್ದರು. ಅಪಾರವಾದ ಓದಿನ ಅನುಭವ ಅವರ ಮಾತುಗಳಿಂದ ಹೊರಹೊಮ್ಮುತ್ತಿತ್ತು.

ಲೋಹಿಯ ಉನ್ನತ ಶಿಕ್ಷಣವನ್ನು ವಿದೇಶದಲ್ಲಿ ಪಡೆಯಲು ತೀರ್ಮಾನಿಸಿದರು. ಅವರ ತಂದೆಯಲ್ಲಿ ಆರ್ಥಿಕ ಬಡತನವಿತ್ತು. ಆದರೂ ಮಗನ ಜ್ಞಾನದಾಹವನ್ನು ತಣಿಸಲು ಬೆಂಬಲವಾದರು. ಅಂದು ಬ್ರಿಟನ್ ಉನ್ನತ ಶಿಕ್ಷಣದ ಆಕರ್ಷಕ ಸ್ಥಳವಾಗಿತ್ತು. ನಮ್ಮನ್ನು ಆಳುತ್ತಿದ್ದ ಕ್ರೂರಿಗಳ ನೆಲದಲ್ಲಿ ನಿಂತು ವಿದ್ಯೆಕಲಿಯಲು ಲೋಹಿಯ ನಿರಾಕರಿಸಿದರು. ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯವನ್ನು ಆಯ್ಕೆ ಮಾಡಿಕೊಂಡರು. ಲೋಹಿಯಾ ಅಂದರೆ ಸಾಮಾನ್ಯವಲ್ಲ, ಸ್ವಾಭಿಮಾನ ಮತ್ತು ರಾಷ್ಟ್ರಪ್ರೇಮದ ಸಂಕೇತ.

ಜರ್ಮನ್ ಭಾಷೆ ಕಲಿತರು

ವಿಶ್ವವಿಖ್ಯಾತ ಜರ್ಮನ್ ಅರ್ಥಶಾಸ್ತ್ರಜ್ಞ ಪ್ರೊ||ಜೆಂಬಾರ್ಟ್ ಅವರಿಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಲೋಹಿಯಾ ಅವರಿಗೆ ಜರ್ಮನ್ ಭಾಷೆ ಗೊತ್ತಿರಲಿಲ್ಲ. ಕೇವಲ ಮೂರೇ ತಿಂಗಳಲ್ಲಿ ಜರ್ಮನ್ ಭಾಷೆ ಕಲಿತು ಪ್ರೊ||ಜೆಂಬಾರ್ಟ್ ಶಿಷ್ಯರಾಗಿ ಉನ್ನತ ಶಿಕ್ಷಣ ಮುಗಿಸಿದರು. ಹಿಟ್ಲರ್‌ನ ಪ್ರವರ್ಧಮಾನವನ್ನು ಕಂಡು ಆತಂಕಗೊಂಡಿದ್ದರು.

1930ರಲ್ಲಿ ಗಾಂಧೀಜಿ ಉಪ್ಪಿನ ಸತ್ಯಾಗ್ರಹ ಶುರು ಮಾಡಿದರು. ಇನ್ನೂರ ಐವತ್ತು ಮೈಲಿ ದೂರದ ದಂಡಿಯ ಸಮುದ್ರ ತೀರದವರೆಗೂ ಕಾಲ್ನಡಿಗೆಯಲ್ಲಿ ಯಶಸ್ವಿಯಾದ ಸತ್ಯಾಗ್ರಹವಿದು. ಲೋಹಿಯಾ ಗಾಂಧೀಜಿ ಹೋರಾಟದಿಂದ ಪ್ರಭಾವಿತರಾದರು. 1932ರಲ್ಲಿ ಉಪ್ಪಿನ ಸತ್ಯಾಗ್ರಹ ಎಂಬ ವಿಷಯದ ಮೇಲೆ ತಮ್ಮ ಸಂಶೋಧನಾ ಪ್ರಬಂಧವನ್ನು ಪೂರ್ಣಗೊಳಿಸಿ ಬರ್ಲಿನ್ ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ. ಪದವಿ ಪಡೆದರು. ಅಂದಿನಿಂದ ಡಾ||ರಾಮ ಮನೋಹರ ಲೋಹಿಯಾ ಜಗತ್ ಪ್ರಸಿದ್ಧವಾದರು.

ಗಂಭೀರ ಚರ್ಚೆ ಇಲ್ಲ

ಡಾ||ರಾಮ ಮನೋಹರ್ ಲೋಹಿಯಾ ಅವರ ಬಗ್ಗೆ ತಿಳಿದುಕೊಳ್ಳಬೇಕಾದದ್ದು ತುಂಬಾ ಇದೆ. ಅವರ ಸಮಾಜವಾದವನ್ನಾಗಲೀ, ಚತುಸ್ಥಂಭ ರಾಷ್ಟ್ರ ವ್ಯವಸ್ಥೆಯನ್ನಾಗಲೀ, ಅವರು ಪ್ರತಿಪಾದಿಸಿದ ವಿಶ್ವ ಸರ್ಕಾರದ ಅನಿವಾರ್ಯತೆಯನ್ನಾಗಲೀ, ವಿಶ್ವ ಸೈನ್ಯದ ಅಗತ್ಯವನ್ನಾಗಲೀ, ಅವರ ವಿಶ್ವಶಾಂತಿಗೆ ಪೂರಕವಾದ ನಿಶ್ಯಸ್ತ್ರೀಕರಣ ಚಿಂತನೆಯನ್ನಾಗಲೀ ಯಾರೂ ಗಂಭೀರವಾಗಿ ಚರ್ಚಿಸುತ್ತಿಲ್ಲ.

ಯುದ್ಧಮುಖಿಯಾಗಿರುವ ವಿಶ್ವಕ್ಕೆ, ಬಂಡವಾಳಿಗಳ ಪಾಲಾಗುತ್ತಿರುವ ವಿಶ್ವದ ಪ್ರಕೃತಿ ಪರಿಸರದ ಸಂಪನ್ಮೂಲ ರಕ್ಷಣೆಗೆ, ದೇಶಿ ಭಾಷೆಗಳ ಉಳಿವಿಗೆ, ನಮ್ಮ ಸಂಸ್ಕೃತಿಯ ಸಂರಕ್ಷಣೆಗೆ, ನೆಲಮಟ್ಟದ ಜನ ಜೀವನದ ಸಂವರ್ಧನೆಗೆ ಗಾಂಧಿ ಮತ್ತು ಲೋಹಿಯಾ ಚಿಂತನೆಗಳು ತುಂಬಾ ಅನಿವಾರ್ಯವಾಗಿವೆ. ಪ್ರಜ್ಞಾವಂತ ಮನಸ್ಸುಗಳು, ಮಾನವ ಪ್ರೇಮಿಗಳು, ನಿಜವಾದ ಪರಿಸರಪ್ರೇಮಿಗಳು ಈ ದಿಕ್ಕಿನಲ್ಲಿ ಗಂಭೀರವಾಗಿ ಚಿಂತಿಸಬೇಕು.

ಕೆಟ್ಟ ಬೆಳವಣಿಗೆ ಗ್ರಹಿಕೆ

ಇಂದು ಭಾರತದ ರಾಜಕಾರಣ ಭ್ರಷ್ಟಗೊಂಡಿದೆ. ಭ್ರಮೆಯ ಪ್ರಗತಿಯ ಚಕ್ರ ಸಾಗುತ್ತಿದೆ. ವಾಸ್ತವತೆಯ ಬಗ್ಗೆ ಯಾರೂ ಚಿಂತಿಸುತ್ತಿಲ್ಲ. ವೈಯಕ್ತಿಕವಾದ ಲಾಭದ ನೆಲೆಯಲ್ಲಿ ಎಲ್ಲರ ಚಿತ್ತ ಹರಿದಿದೆ. ಲೋಹಿಯಾ ಅಂದೇ ಇಂಥ ಕೆಟ್ಟ ಬೆಳವಣಿಗೆಯನ್ನು ಗ್ರಹಿಸಿದ್ದರು. ಮಾನವೀಯ ಸಮಾಜವಾದಿ ಸಿದ್ಧಾಂತಗಳ ಮೂಲಕ ಪರಿಹಾರ ಕಂಡುಕೊಳ್ಳಲು ಯತ್ನಿಸಿದ್ದರು.

ಡಾ.ರಾಮ ಮನೋಹರ ಲೋಹಿಯಾ : ಶತಮಾನ ಕಂಡ ಧೀಮಂತ ಶಿಖರ

1942ರ ಭೂಗತ ಚಳವಳಿ ನಾಯಕ್ವ ವಹಿಸಿ ಸೆರೆಯಾಗಿ ಲಾಹೋರ್ ಕೋಟೆಯ ಸೆರೆಮನೆಯಲ್ಲಿ ಚಿತ್ರಹಿಂಸೆ ; 1946ರಲ್ಲಿ ಗೋವಾ ಮತ್ತು ನೇಪಾಳ ಹೋರಾಟ; ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರಿಟನ್, ಪೋರ್ಚುಗಲ್, ನೇಪಾಳ, ಇಂಡಿಯಾ ಈ ದೇಶಗಳಲ್ಲಿ ಇಪ್ಪತ್ತು ಸಲ ದಸ್ತಗಿರಿಯಾಗಿದ್ದರು ; ಇಷ್ಟೇಕೆ, ಇಂಡಿಯಾ ಸರ್ಕಾರ ಅವರನ್ನು ಹನ್ನೊಂದು ಸಲ ದಸ್ತಗಿರಿ ಮಾಡಿತ್ತು.

(ಇಡೀ ಶರೀರದಲ್ಲಿ ಮೆದುಳನ್ನು ಒಳಗೊಂಡಿರುವ ಏಕೈಕ ವ್ಯಕ್ತಿ ಲೋಹಿಯಾ -*ಮಹಾತ್ಮ ಗಾಂಧೀಜಿ*)

ಹಿಂದೆಂದಿಗಿಂತಲೂ ಹೆಚ್ಚಾಗಿ ಇಂದು ಮಾನವೀಯತೆ ಇರುವವರ ಮನಸ್ಸನ್ನು ಸರ್ರನೆ ಸೂರೆಗೊಳ್ಳುವ ಒಂದು ಪದವೆಂದರೆ ಡಾ||ಲೋಹಿಯಾ. ಅದು ನಾವು ಪ್ರಾಮಾಣಿಕತೆಗೆ ನಿಘಂಟಿನಲ್ಲಿ ಸೇರಿಸಬಹುದಾದ ಮತ್ತೊಂದು ಹೆಸರು. ಡಾ||ಲೋಹಿಯಾ ಬಡವರ ಪರವಾಗಿ ಬದುಕಿನ ಉದ್ದಕ್ಕೂ ಹೋರಾಟ ಮಾಡುತ್ತಾ ಸಮಾನತೆಗಾಗಿ ಅನೇಕ ಕಷ್ಟ ಸಂಕಷ್ಟಗಳನ್ನು ಎದುರಿಸಿ, ಸ್ವಜನರಿಂದಲೂ ಜೈಲುವಾಸವನ್ನನುಭವಿಸಿ, ನೋವನ್ನು ನುಂಗಿಕೊಂಡು ಮುನ್ನಡೆದರು. ಇಂದು ಭಾರತದ ರಾಜಕೀಯ, ವಿದ್ಯಾಭ್ಯಾಸ ಕ್ರಮ, ಸಾಮಾಜಿಕ ಅಸಮತೆ, ಆರ್ಥಿಕ ಅಸ್ತವ್ಯಸ್ತತೆ, ನಿರುದ್ಯೋಗ, ಒಳಜಗಳ, ಗುಂಪುಗಾರಿಕೆ, ಜಾತಿ, ವರ್ಗ ಇತ್ಯಾದಿ ಸಮಸ್ಯೆಗಳಿಂದಾಗಿ ಉಂಟಾಗಿರುವ ಅನಾರೋಗ್ಯಕರ ವಾತಾವರಣಕ್ಕೆ ಉಳಿದಿರುವ ಏಕೈಕ ಚಿಕಿತ್ಸೆ ಎಂದರೆ ಡಾ||ಲೋಹಿಯಾ ಅವರ ತತ್ವ ಚಿಂತನೆಯ ಸ್ವೀಕಾರ.



ಜ.ಹೊ.ನಾ., ಹಾಸನ.
ಮೊ : 9480370233

ಪರಿಚಯ

ಡಾ||ಲೋಹಿಯಾ ಅಕ್ಬರ್ ಪೂರ್‌ನಲ್ಲಿ 23-3-1910ರಲ್ಲಿ ವೈಶ್ಯ ಮನೆತನದಲ್ಲಿ ಹುಟ್ಟಿದರು. ತಂದೆ ಹಿರಾಲಾಲ್. ತಾಯಿ ಚಂದ್ರಿ. ಹುಟ್ಟು ಹೆಸರು ರಾಮ ಮನೋಹರ. ಲೋಹಗಳ ವ್ಯಾಪಾರ ಮನೆತನದ ಕಸುಬಾಗಿತ್ತು. ಅದರಿಂದಾಗಿ ಅವರಿಗೆ ಬಂದ ಮನೆತನದ ಹೆಸರು ಲೋಹಿಯಾ. ಹುಟ್ಟಿದ ಎರಡೂವರೆ ವರ್ಷಕ್ಕೆ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆರೈಕೆಯಲ್ಲಿ ಬೆಳೆದರು. ಬಾಲ್ಯದ ದಿನಗಳನ್ನು ಕಳೆದದ್ದು ಬಾಂಬೆಯಲ್ಲಿ. 1-8-1920ರಲ್ಲಿ ಲೋಕಮಾನ್ಯ ತಿಲಕರು ತೀರಿಕೊಂಡಾಗ ಹತ್ತು ವರ್ಷದ ಲೋಹಿಯಾ ನಾಯಕತ್ವದಲ್ಲಿ ವಿದ್ಯಾರ್ಥಿ ಸಮೂಹ ತನ್ನ ಗೌರವ ಅರ್ಪಿಸಿತು. ಆಗಲೇ ಗಾಂಧಿಯ ಕರೆಗೆ ಓಗೊಟ್ಟು ಸ್ವಾತಂತ್ರ್ಯದ ಕೂಗು ಬಾಲಕನ ಕಂಠದಿಂದ ಚಿಮ್ಮಿ ಬಂತು.

ಲೋಹಿಯಾ ವಿದ್ಯಾಭ್ಯಾಸ

1924ರಲ್ಲಿ ಹದಿನಾಲ್ಕು ವರ್ಷದ ಲೋಹಿಯಾ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದರು. 1925ರಲ್ಲಿ 611ಅಂಕ ಪಡೆದು ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆಯಾಗಿ ಬಾಂಬೆ ಬಿಟ್ಟು ಬನಾರಸ್ ಹಿಂದೂ ಯೂನಿವರ್ಸಿಟಿಯಲ್ಲಿ 1927ರಲ್ಲಿ ಇಂಟರ್ ಮೀಡಿಯಟ್ ಮುಗಿಸಿದರು.

ಇತಿಹಾಸ ಅವರ ಆಂತರಿಕ ವಿಷಯವಾಗಿತ್ತು. ಹಗಲು ರಾತ್ರಿಗಳನ್ನದೆ ಇತಿಹಾಸದ ಪುಸ್ತಕಗಳ ಪ್ರತಿ ಪುಟವನ್ನು ಅಧ್ಯಯನ ಮಾಡಿದರು. 1929ರಲ್ಲಿ ಎರಡನೇ ಶ್ರೇಣಿಯಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಬಿ.ಎ. ಮುಗಿಸಿದರು. ಅದೇ ವರ್ಷ ಅಗರವಾಲ್ ನಿಧಿಯಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೊರ ದೇಶಕ್ಕೆ ಹೋಗುವುದೆಂದು ತೀರ್ಮಾನಿಸಿದಾಗ ಅವರ ಮುಂದೆ ಬಂದ ಸಮಸ್ಯೆ ಲಂಡನ್‌ಗೆ ಅಥವಾ ಬರ್ಲಿನ್‌ಗೆ ಎಂಬುದು. ಲಂಡನ್ ತಲುಪಿ ಒಂದು ವಾರ ಕೂಡ ಅಲ್ಲಿರಲಾಗಲ್ಲಿ. ಅವರ ಹೃದಯ ಕೊತ ಕೊತನೆ ಕುದಿಯತೊಡಗಿತು. ಕಾರಣ ನಮ್ಮ ದೇಶವನ್ನು ಗುಲಾಮ ದೇಶವನ್ನಾಗಿ ಮಾಡಿಕೊಂಡ ಬ್ರಿಟೀಷರಿಂದ ಕಲಿಯುವುದೇ ಎಂದು. ಅವರ ಹೃದಯಕ್ಕೆ ಈಟಿಯಿಂದ ಮೀಟಿದಂತಾಯ್ತು. ಅಲ್ಲಿಂದ ಸೀದಾ ಬರ್ಲಿನ್‌ಗೆ ವಿಮಾನ ಹತ್ತಿದರು.

ಡಾಕ್ಟರೇಟ್ ಪದವಿ

ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಆರ್ಥಿಕ ವಿಷಯವನ್ನು ಆಯ್ಕೆ ಮಾಡಿಕೊಂಡು ಲೋಹಿಯಾ ಅಧ್ಯಯನ ಆರಂಭಿಸಿದರು. ಅದಕ್ಕೆ ಮೊದಲು ಅಲ್ಲಿಯ ನಿಯಮದಂತೆ ಪ್ರತಿ ವಿದ್ಯಾರ್ಥಿಯೂ ಅವನ ಪ್ರಾಧ್ಯಾಪಕರನ್ನು ಆರಿಸಿಕೊಳ್ಳಬೇಕು. ಅದರಂತೆ ಲೋಹಿಯಾರವರು ವಿಶ್ವದ ಹೆಸರಾಂತ ಅರ್ಥಶಾಸ್ತ್ರಜ್ಞರಾದ ಜರ್ಮನಿಯ ಪ್ರೊ|| ಬರ್ನಾಡರನ್ನು ಭೇಟಿಯಾದಾಗ ಒಂದು ಆಶ್ಚರ್ಯ ಕಾದಿತ್ತು. ಅದೇನೆಂದರೆ, ಲೋಹಿಯಾ ಇಂಗ್ಲೀಷಿನಲ್ಲಿ ಮಾತನಾಡಿದಾಗ ವಿಶ್ವವಿಖ್ಯಾತ ಅರ್ಥಶಾಸ್ತ್ರಜ್ಞ 'ನನಗೆ ಜರ್ಮನ್ ಭಾಷೆ ಬಿಟ್ಟು ಇಂಗ್ಲೀಷ್ ಬಾರದು' ಎಂದರು. ಲೋಹಿಯಾ ಮೂರು ತಿಂಗಳ ಕಾಲಾವಕಾಶ ಪಡೆದು ಜರ್ಮನ್ ಭಾಷೆ ಕಲಿತು ವ್ಯಾಸಂಗ ಮುಂದುವರೆಸಿ 1932ರಲ್ಲಿ ಡಾಕ್ಟರೇಟ್ ಪದವಿ ಪಡೆದುಕೊಂಡರು.

ಸ್ಥಾನಮಾನ

1934ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪನೆಗೆ ನೆರವಾಗಿ, 1936-38-ಕಾಂಗ್ರೆಸ್‌ನ ವಿದೇಶಾಂಗ ಖಾತೆ ಕಾರ್ಯದರ್ಶಿಯಾಗಿ, 1946ರಲ್ಲಿ ಕಾಂಗ್ರೆಸ್ ಸಮಾಜವಾದಿ ಸಮ್ಮೇಳನದ ಅಧ್ಯಕ್ಷರಾಗಿ, 1951ರಲ್ಲಿ ಏಷ್ಯಾದ ಸೋಷಲಿಸ್ಟ್ ಸಮ್ಮೇಳನವನ್ನು ನಿಯೋಜಿಸಿ, 1954ರಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ, 1956ರಲ್ಲಿ ಮ್ಯಾನ್ ಕೈಂಡ್ ಪತ್ರಿಕೆಯ ಸಂಪಾದಕ ಮಂಡಲಿಯ ಅಧ್ಯಕ್ಷ ಮತ್ತು ಸೋಷಲಿಸ್ಟ್ ಪಕ್ಷದ ಅಧ್ಯಕ್ಷರಾಗಿ, 1962ರ ಚುನಾವಣೆಯಲ್ಲಿ ಪೂಲ್ ಪೂರ್‌ನಿಂದ ನೆಹರೂ ವಿರುದ್ಧ ಚುನಾವಣೆಯಲ್ಲಿ ಸೋತು, ಪುನಃ 1963ರಲ್ಲಿ ಫರೂಕಾಬಾದ್ ಕ್ಷೇತ್ರದಿಂದ 58 ಸಾವಿರ ಪ್ರಚಂಡ ಬಹುಮತದೊಡನೆ ಲೋಕಸಭೆಗೆ ಆಯ್ಕೆಯಾಗಿ 1967ರಲ್ಲಿ ಕನೌಜ್ ಕ್ಷೇತ್ರದಿಂದ ಪುನರಾಯ್ಕೆಯಾದರು.

ಚಳವಳಿ

1942ರ ಭೂಗತ ಚಳವಳಿ ನಾಯಕ್ವ ವಹಿಸಿ ಸೆರೆಯಾಗಿ ಲಾಹೋರ್ ಕೋಟೆಯ ಸೆರೆಮನೆಯಲ್ಲಿ ಚಿತ್ರಹಿಂಸೆ ; 1946ರಲ್ಲಿ ಗೋವಾ ಮತ್ತು ನೇಪಾಳ ಹೋರಾಟ; ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರಿಟನ್, ಪೋರ್ಚುಗಲ್, ನೇಪಾಳ, ಇಂಡಿಯಾ ಈ ದೇಶಗಳಲ್ಲಿ ಇಪ್ಪತ್ತು ಸಲ ದಸ್ತಗಿರಿಯಾಗಿದ್ದರು ; ಇಷ್ಟೇಕೆ, ಇಂಡಿಯಾ ಸರ್ಕಾರ ಅವರನ್ನು ಹನ್ನೊಂದು ಸಲ ದಸ್ತಗಿರಿ ಮಾಡಿತ್ತು ; 1964ರ ಮೇ 27ರಂದು ಪ್ರಧಾನಿ ನೆಹರೂ ಸತ್ತಾಗ ಲೋಹಿಯಾ ಮಾನವೀಯ ಹೋರಾಟಕ್ಕಾಗಿ ಮಿಸಿಸಿಪ್ಪಿಯ ಜಾಕ್ಸನ್ ಎಂಬಲ್ಲಿ ದಸ್ತಗಿರಿಯಾಗಿದ್ದರು. *(-ಸಶೇಷ)*

ಶಾಸ್ತ್ರದ ವಿಧಿ ಉಲ್ಲಂಘಿಸಿದವನು ಸಿದ್ಧಿ ಪಡೆಯಲಾರ

ಯಾರು ಶಾಸ್ತ್ರದ ವಿಧಿಯನ್ನು ಉಲ್ಲಂಘಿಸಿ ಮನಸೋ ಇಚ್ಛೆ ವರ್ತಿಸುತ್ತಾನೋ ಅವನು ಯಾವ ಸಿದ್ಧಿಯನ್ನೂ, ಸುಖವನ್ನೂ, ಪರಗತಿಯನ್ನೂ ಹೊಂದಲಾರ. ಬುದ್ಧಿವಂತರಾದವರು ದುಷ್ಕೃತ್ಯಗಳಿಂದ ಹಾಳಾದರೆ ರಾಷ್ಟ್ರಕ್ಕೆ ಹಾನಿ. ಧನುರ್ವಿದ್ಯೆ ಬಲ್ಲವ ಹೂಡಿದ ಬಾಣ ಒಬ್ಬನನ್ನು ಹೊಡೆದೀತು! ಆದರೆ ಬುದ್ಧಿವಂತನ ಬುದ್ಧಿ ಹಾಳಾಯಿತೆಂದರೆ ರಾಜನ ಸಹಿತವಾಗಿ ರಾಷ್ಟ್ರವನ್ನೇ ಅವನ ದುರ್ಗುಣ ಕೊಲ್ಲುತ್ತದೆ. ಆದ್ದರಿಂದ ದುಷ್ಕೃತ್ಯದಿದ ದೂರವಾದರೆ ರಾಷ್ಟ್ರಕ್ಕೆ ಹಿತವಾಗುತ್ತದೆ ಎಂಬ ಅಭಿಪ್ರಾಯದಿಂದ ರಾಜರು 'ಅಧಃ ಕುರು ಚ ದುಷ್ಕೃತಮ್' ಎಂದಿದ್ದಾರೆ. ಮಹಾತ್ಮರಾದ ಗುರುಗಳಿಗೆ ಶಿಷ್ಯರಲ್ಲಿ ಒಬ್ಬ ಕೆಟ್ಟ ಗುಣದವನಿದ್ದ. ಇನ್ನೊಬ್ಬರನ್ನು ಹಿಂಸಿಸುವುದು, ಕದಿಯುವುದು, ಸುಳ್ಳು ಹೇಳುವುದು ಅವನಿಗೆ ಪ್ರಿಯವಾಗಿತ್ತು. ಶಿಷ್ಯನನ್ನು ತಿದ್ದಲು ಗುರುವು ತಿದ್ದಲು ಸವಿ ಮಾತನ್ನು ಹೇಳಿದರು, ಹೊಡೆದರು. ಆದರೂ ಆತ ದಾರಿಗೆ ಬರಲಿಲ್ಲ. ಕೊನೆಗೆ ಬುದ್ಧಿ ಹೇಳುವುದನ್ನೂ ಬಿಟ್ಟರು. ಅವನು ಒಂದು ಕೆಟ್ಟ ಕೆಲಸ ಮಾಡಿದನೆಂಬ ಸುದ್ದಿ ಬರುತ್ತಲೇ ದೇವ ಮಂದಿರದ ಗೋಡೆಗೆ ಒಂದು ಮೊಳೆ ಹೊಡೆದಿಡುತ್ತಿದ್ದರು. ಹೀಗೆ ಹೊಡೆದ ಮೊಳೆಗಳಿಂದ ಇಡೀ ಗೋಡೆ ತುಂಬಿತು. ಒಮ್ಮೆ ಈ ಶಿಷ್ಯ ಕದಿಯುವಾಗ ರಾಜಭಟರಿಗೆ ಸಿಕ್ಕಿ ಅವನ ತಲೆ ಕಡಿಯಲು ವಧಾಸ್ಥಾನಕ್ಕೆ ಕರೆದೊಯ್ಯುತ್ತಿದ್ದರು. ಆಗ ಆತ ಆರ್ತನಾಗಿ ಗುರುವನ್ನು ಕೂಗಿ ಕೂಗಿ ಕರೆದ. 'ಇದೊಂದು ಸಲ ನನ್ನನ್ನು ಬಿಡಿಸಿ ಗುರುಗಳೇ, ಪ್ರಾಮಾಣಿಕವಾಗಿ ಬದುಕುತ್ತೇನೆ' ಎಂದು ಬೇಡಿಕೊಂಡ. ಗುರುಗಳ ಮಾತಿಗೆ ಮನ್ನಣೆಯಿತ್ತು ಶಿಷ್ಯನನ್ನು ಬಿಟ್ಟರು. ನಂತರ ಈ ಶಿಷ್ಯ ಕೆಟ್ಟ ಕೆಲಸಗಳ ಕೈಬಿಟ್ಟು ಶಿಷ್ಟ ಕೆಲಸಗಳಲ್ಲಿ ನಿರತನಾದ. ಅವನ ಪ್ರತಿಯೊಂದು ಒಳ್ಳೆಯ ಕೆಲಸದ ಬಳಿಕ ಗುರುಗಳು ಗೋಡೆಯಿಂದ ಒಂದು ಮೊಳೆ ಕಿತ್ತು ಹಾಕುತ್ತಿದ್ದರು. ಕೊನೆಯ ಮೊಳೆ ಕೀಳುವ ದಿನ ಶಿಷ್ಯ ಉರಿಯುತ್ತಿದ್ದ ಮನೆಯೊಳಗೆ ಸಾಹಸದಿಂದ ಹೊಕ್ಕು ಸಾಯುತ್ತಿದ್ದ ಮಗುವನ್ನು ಉಳಿಸಿದ. ಆದರೂ ಅವನು ಕೆಟ್ಟವನೆಂದೇ ಭಾವಿಸಿದ ಜನ ಆತ ಕಳ್ಳತನಕ್ಕಾಗಿಯೇ ಒಳಹೊಕ್ಕನೆಂದು ತಿಳಿದು ಚೆನ್ನಾಗಿ ಹೊಡೆದರು. ಇದು ಗುರುಗಳಿಗೆ ತಿಳಿಯಿತು. ಶಿಷ್ಯ ತನ್ನ ಬಳಿಗೆ ಬರುವಾಗ ಕೊನೆಯ ಮೊಳೆಯನ್ನು ಆತ ಗೋಡೆಯಿಂದ ಕಿತ್ತೆಸೆದ. ಶಿಷ್ಯ ಗೋಡೆಯನ್ನು ನೋಡಿ, 'ಗುರುಗಳೇ ಗೋಡೆಯಿಂದ ಮೊಳೆಗಳನ್ನು ಕಿತ್ತರೂ ಮೊಳೆ ಹೊಡೆದ ಗುರುತುಗಳಿನ್ನೂ ಅಲ್ಲೇ ಶಾಶ್ವತವಾಗಿ ಉಳಿದು, ಗೋಡೆ ಅಂದಗೆಟ್ಟಿದೆಯಲ್ಲ' ಎಂದ. 'ಹೌದು ಮಗೂ, ಒಮ್ಮೆ ಕೆಟ್ಟ ಕೆಲಸಗಳನ್ನು ಮಾಡಿದರೂ ಹಾಗೆಯೇ. ಅವನು ಕೆಟ್ಟವನೆಂದು ಅಪವಾದ ಹೋಗುವುದಿಲ್ಲ. ಆದ್ದರಿಂದ ಹಾಳು ಕೆಲಸ ಮಾಡುವ ಮುನ್ನ ಯೋಚಿಸಬೇಕು' ಎಂದರು ಗುರುಗಳು.

-ಶ್ರೀ ಸುಬುದೇಂದ್ರ ಶ್ರೀಪಾದರು

ಅಂಬೇಡ್ಕರ್ ಮತ್ತು ಲೋಹಿಯಾ : ಒಂದು ತುಲನಾತ್ಮಕ ನೋಟ



ಲೋಹಿಯಾ, ಗಾಂಧಿ ಮತ್ತು ಅಂಬೇಡ್ಕರ್ ಒಂದು ರೀತಿಯ ತ್ರಿಕೋನ ಸಂಬಂಧವುಳ್ಳವರು. ಒಂದು ರೀತಿಯಲ್ಲಿ, ತ್ರಿಕೋನ ಪ್ರೇಮಕಥೆ ಅಂತ ಹೇಳ್ತೀವಲ್ಲ ಸಿನಿಮಾಗಳಲ್ಲಿ, ಆ ರೀತಿ ಒಂದು ತರಹದ ತ್ರಿಕೋನ ದುರಂತ ಪ್ರೇಮಕಥೆ ಇದು. ಈ ಮೊದಲೇ ಸೂಚಿಸಿದಂತೆ, ಲೋಹಿಯಾ ಅವರ ಬಗ್ಗೆ ಮಾತನಾಡಬೇಕಾದರೆ ಗಾಂಧಿಯ ಪ್ರಸ್ತಾವವಿಲ್ಲದೇ ಮಾತನಾಡೋದಕ್ಕೆ ಸಾಧ್ಯವೇ ಇಲ್ಲ. ಹಾಗೇನೇ ಅಂಬೇಡ್ಕರ್ ಬಗ್ಗೆ ಮಾತನಾಡಬೇಕಾದರೂ ಗಾಂಧಿಯ ಪ್ರಸ್ತಾವವಿಲ್ಲದೇ ಮಾತನಾಡೋಕೆ ಸಾಧ್ಯವೇ ಇಲ್ಲ. ಅಂಬೇಡ್ಕರ್‌ಗೆ ಗಾಂಧಿ ಒಂದು ರೆಫರೆನ್ಸ್. ಗಾಂಧಿಗೆ ಅಂಬೇಡ್ಕರ್ ಒಂದು ರೆಫರೆನ್ಸ್. ಹಾಗೇನೇ ಲೋಹಿಯಾ ಮತ್ತು ಗಾಂಧಿ ನಡುವಣ ಸಂಬಂಧ ಕೂಡ.

ಬಹುಶಃ ಆಧುನಿಕ ಭಾರತದ ಇತಿಹಾಸದಲ್ಲಿ ವಿವೇಕಾನಂದ ಮತ್ತು ಮಹಾತ್ಮ ಗಾಂಧಿಯವರನ್ನು ಬಿಟ್ಟರೆ ಅತ್ಯಂತ ಹೆಚ್ಚು ಸಾರ್ವಜನಿಕ ಪ್ರಭಾವವನ್ನು ಬೀರಿದವರಲ್ಲಿ ಅಂಬೇಡ್ಕರರೇ ಮೊದಲಿಗರು ಎಂದು ಕಾಣುತ್ತದೆ. ಇಂತಹ ಮಹನೀಯರನ್ನು ಜಗತ್ತಿನ ಬಹಳ ಮಹತ್ವದ ಇತರ ಚಿಂತಕರು ಮತ್ತು ದಾರ್ಶನಿಕರ ಜೊತೆಯಲ್ಲಿ ಇಟ್ಟು ಒಂದು ತೌಲನಿಕವಾದ ವಿವೇಚನೆ ಮಾಡುವುದರಿಂದ ಅನೇಕ ರೀತಿಯ ಪ್ರಯೋಜನಗಳಿವೆ. ಇಂತಹ ಪ್ರಯತ್ನವೊಂದರ ಭಾಗವಾಗಿ ಇಲ್ಲಿ ಅಂಬೇಡ್ಕರ್‌ರನ್ನು ಸಮಾಜವಾದಿ ಚಿಂತಕ ಮತ್ತು ಹೋರಾಟಗಾರ ಡಾ.ರಾಮ ಮನೋಹರ ಲೋಹಿಯಾರ ಜೊತೆಗಿಟ್ಟು ನೋಡುವ ಒಂದು ಪ್ರಯತ್ನ ಮಾಡಲಾಗಿದೆ. ಹೀಗೆ ಇವರಿಬ್ಬರನ್ನು ಜೊತೆಗಿಟ್ಟು ನೋಡುವ ಕ್ರಮದಲ್ಲೇ ಗಾಂಧೀಜಿಯ ಪ್ರವೇಶ ಅನಿವಾರ್ಯವಾಗುತ್ತದೆ. ಇದನ್ನು ಮೊದಲಿಗೇ ತಿಳಿಸಿ ನನ್ನ ಬರಹ ಮುಂದುವರೆಸ ಬಯಸುವೆ.

ಡಿ.ಎಸ್.ನಾಗಭೂಷಣ್, ಮೊ : 9449242284

ತ್ರಿಕೋನ ದುರಂತ ಪ್ರೇಮಕಥೆ

ಲೋಹಿಯಾ, ಗಾಂಧಿ ಮತ್ತು ಅಂಬೇಡ್ಕರ್ ಒಂದು ರೀತಿಯ ತ್ರಿಕೋನ ಸಂಬಂಧವುಳ್ಳವರು. ಒಂದು ರೀತಿಯಲ್ಲಿ, ತ್ರಿಕೋನ ಪ್ರೇಮಕಥೆ ಅಂತ ಹೇಳ್ತೀವಲ್ಲ ಸಿನಿಮಾಗಳಲ್ಲಿ, ಆ ರೀತಿ ಒಂದು ತರಹದ ತ್ರಿಕೋನ ದುರಂತ ಪ್ರೇಮಕಥೆ ಇದು. ಈ ಮೊದಲೇ ಸೂಚಿಸಿದಂತೆ, ಲೋಹಿಯಾ ಅವರ ಬಗ್ಗೆ ಮಾತನಾಡಬೇಕಾದರೆ ಗಾಂಧಿಯ ಪ್ರಸ್ತಾವವಿಲ್ಲದೇ ಮಾತನಾಡೋದಕ್ಕೆ ಸಾಧ್ಯವೇ ಇಲ್ಲ. ಹಾಗೇನೇ ಅಂಬೇಡ್ಕರ್ ಬಗ್ಗೆ ಮಾತನಾಡಬೇಕಾದರೂ ಗಾಂಧಿಯ ಪ್ರಸ್ತಾವವಿಲ್ಲದೇ ಮಾತನಾಡೋಕೆ ಸಾಧ್ಯವೇ ಇಲ್ಲ. ಅಂಬೇಡ್ಕರ್‌ಗೆ ಗಾಂಧಿ ಒಂದು ರೆಫರೆನ್ಸ್. ಗಾಂಧಿಗೆ ಅಂಬೇಡ್ಕರ್ ಒಂದು ರೆಫರೆನ್ಸ್. ಹಾಗೇನೇ ಲೋಹಿಯಾ ಮತ್ತು ಗಾಂಧಿ ನಡುವಣ ಸಂಬಂಧ ಕೂಡ.

ಸ್ಫೂರ್ತಿಯ ಶಕ್ತಿಯಾಗಿದ್ದರು

ಗಾಂಧಿ-ಅಂಬೇಡ್ಕರ್ ಮತ್ತು ಲೋಹಿಯಾ ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಬಹಳ ಜನಪ್ರಿಯವಾದ ಹೆಸರುಗಳು. ಕರ್ನಾಟಕದಲ್ಲಿ ರಾಜಕೀಯ ಅಥವಾ ಸಾಮಾಜಿಕ ಕಳಕಳಿಯಿರುವ ಜನರಲ್ಲಿ ಲೋಹಿಯಾ ಮತ್ತು ಅಂಬೇಡ್ಕರ್ ಹೆಸರುಗಳನ್ನು ಕೇಳದಂತಹವರು ಬಹಳ ಕಡಿಮೆ. 60-70ರ ದಶಕದಲ್ಲಿ ಲೋಹಿಯಾ ಅವರು ಕರ್ನಾಟಕದ ಯುವಜನರ ಸ್ಫೂರ್ತಿ ಶಕ್ತಿಯಾಗಿದ್ದರು. ಹಾಗೆಯೇ ಕರ್ನಾಟಕದ ರಾಜಕಾರಣದ ಸ್ಫೂರ್ತಿ ಶಕ್ತಿಯೂ ಆಗಿದ್ದರು. ನಂತರ 80-90ರ ದಶಕದ ಹೊತ್ತಿಗೆ ಅದೆಲ್ಲ ಅಂಬೇಡ್ಕರ್ ಕೇಂದ್ರಿತವಾಯಿತು. ಅದಕ್ಕೆ ಕಾರಣ ಕೂಡ ಇದೆ.

ದಲಿತ ಚಳವಳಿ ಆರಂಭಕಾರರು

ಈ ಅಂಬೇಡ್ಕರ್ ಧಾರೆ ಕರ್ನಾಟಕದಲ್ಲಿ ಆರಂಭವಾಗಿದ್ದು, ಲೋಹಿಯಾ ಧಾರೆಯಿಂದ ಒಡೆದು ಬಂದು ; ಅಥವಾ ದಲಿತ ದೃಷ್ಟಿಯಿಂದ ಅದರ ವಿಸ್ತರಣೆಯ ಪ್ರಯತ್ನವಾಗಿ. ಅದು ಸಮಾಜವಾದಿ ಯುವಜನ ಸಭಾದಲ್ಲಿದ್ದ (ಸಮಾಜವಾದಿ ಯುವಜನ ಸಭಾ ಅಂತಂದರೆ, ಲೋಹಿಯಾ ಅವರ ಸಮಾಜವಾದಿ ಧಾರೆ ಮತ್ತು ಪಕ್ಷದ ಯುವಜನ ಶಾಖೆ) ಇಬ್ಬರು ವ್ಯಕ್ತಿಗಳು ದೇವನೂರು ಮಹಾದೇವ ಮತ್ತು ಬಿ.ಕೃಷ್ಣಪ್ಪ ಹಾಗೂ ನಂತರದಲ್ಲಿ ಕಮ್ಯೂನಿಸ್ಟ್ ಧಾರೆಯಿಂದ ಸಿದ್ದಲಿಂಗಯ್ಯ ಸಮಾಜವಾದಿ ಯುವಜನ ಸಭಾದ ಚೌಕಟ್ಟನ್ನು ವಿಸ್ತರಿಸಿಕೊಂಡು ಅಥವಾ ಅದನ್ನು ಒಡೆದುಕೊಂಡು ದಲಿತ ಸಂಘರ್ಷ ಸಮಿತಿಯನ್ನು, ದಲಿತ ಚಳವಳಿಯನ್ನು ಕರ್ನಾಟಕದಲ್ಲಿ ಆರಂಭ ಮಾಡಿದರು ಎಂದು ಹೇಳಬಹುದು.

ನಾಯಕರ ಮೇಲೆ ಪ್ರಭಾವ

ಯಾಕೆ, ಇವರಿಬ್ಬರಿಗೆ ಲೋಹಿಯಾರ ವಿಚಾರ ಧಾರೆ ಸಾಲದಾಯಿತೇ? ಅಂಬೇಡ್ಕರ್ ಯಾಕೆ ಬಂದ್ರು? ಅಂದ್ರೆ, ಅವರು ಲೋಹಿಯಾರನ್ನು ಬಿಟ್ಟು ಅಂಬೇಡ್ಕರರೆಡೆಗೆ ಬಂದ್ರು ಅಂತಲ್ಲ. ಎಪ್ಪತ್ತರ ದಶಕದ ಇಂದಿರಾ ಕಾಂಗ್ರೆಸ್ ರಾಜಕಾರಣ ಪರಿಶಿಷ್ಟ ಜಾತಿ-ವರ್ಗಗಳನ್ನು ತನ್ನ ಜನಪ್ರಿಯ 'ಸಮಾಜವಾದಿ' ಕಾರ್ಯಕ್ರಮಗಳು ಮತ್ತು ಘೋಷಣೆಗಳಿಗಾಗಿ ವಿಶೇಷ ಗುರಿಯನ್ನಾಗಿಸಿಕೊಂಡು ಅವುಗಳನ್ನು ವಿಸ್ತಾರವಾದ ಶೋಷಿತ ಸಮುದಾಯದಿಂದ ಬೇರೆ 'ಕತ್ತರಿಸಿ'ಟ್ಟು ಅವುಗಳ ಅಸ್ಮಿತೆಯನ್ನು ಪ್ರತ್ಯೇಕರಿಸಿದ್ದು, ಕರ್ನಾಟಕದಲ್ಲಿ ದೇವರಾಜ ಅರಸರ 'ಪ್ರಗತಿಪರ' ರಾಜಕಾರಣದ ಭಾಗವಾಗಿ ಜಾರಿಗೆ ಬಂದ ಭೂ ಸುಧಾರಣೆ, ಜೀತ ಪದ್ದತಿ ನಿರ್ಮೂಲನೆ ಮತ್ತು ಖಾಸಗಿ ಸಾಲ ರದ್ದತಿಗಳ ಫಲಾನುಭವಿಗಳಾಗಿ ರಾಜ್ಯ ಮಟ್ಟದಲ್ಲಿ ದಲಿತರು ಸಾಮಾನ್ಯ ಹಿತಾಸಕ್ತಿಗಳ ಒಂದು ದೊಡ್ಡ ಸಮೂಹವಾಗಿ ತಮ್ಮನ್ನು ತಾವು ಸ್ಪಷ್ಟವಾಗಿ ಗುರುತಿಸಿಕೊಳ್ಳಲು ಸಾಧ್ಯವಾದದ್ದು ಮತ್ತು ಇದೆಲ್ಲದರ ಜೊತೆಗೇ-ಇದಕ್ಕೆ ಪೂರಕವಾಗಿ ಮಹಾರಾಷ್ಟ್ರದಲ್ಲಿ ಆರಂಭವಾದ ದಲಿತ್ ಪ್ಯಾಂಥರ್ಸ್ ಚಳವಳಿ ಆ ರಾಜ್ಯದ ಗಡಿಗಳನ್ನೂ ದಾಟಿ ಅಂಬೇಡ್ಕರರ ವಿಚಾರಧಾರೆಗೆ ಒಂದು ಹೊಸ ಸಾಂಸ್ಕೃತಿಕ ತೀವ್ರತೆಯನ್ನು ಒದಗಿಸಿದ್ದು, ಎಲ್ಲಕ್ಕಿಂತ ಹೆಚ್ಚಾಗಿ ಕರ್ನಾಟಕದ ಸಮಾಜವಾದಿ ಚಳವಳಿ ಬಿರುಕುಗೊಂಡು ಅದರ (ಲೇಖಕ-ಚಿಂತಕರನ್ನೊಳಗೊಂಡ) ಬೌದ್ಧಿಕ ಭಾಗ ತನ್ನ ಜಾತಿ ವಿರೋಧಿ ನೀತಿಯನ್ನು ತನ್ನದೇ ವಿಶಿಷ್ಟ ಕಾರಣಗಳಿಗಾಗಿ ಕೇವಲ ಬ್ರಾಹ್ಮಣ ವಿರೋಧಿ ನೀತಿಯನ್ನು ಅಪ್ರಸ್ತುತಗೊಳಿಸಿಕೊಂಡದ್ದು, ಈ ಪ್ರವೃತ್ತಿಯ ವಿರುದ್ಧ ನಡೆಸಿದ ಪರಿಣಾಮಕಾರಿ (ಅಪ)ಪ್ರಚಾರ ಮತ್ತು ಆಗ ಕರ್ನಾಟಕದಲ್ಲಿ ಹೊಸ ಹುರುಪಿನೊಂದಿಗೆ ಆರಂಭವಾದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ವಿಸ್ತರಣಾ ಚಟುವಟಿಕೆಗಳು ಇವೆಲ್ಲ ಈ ನಾಯಕರ ಮೇಲೆ ಪ್ರಭಾವ ಬೀರಿರಬಹುದು.

ಸ್ಪಷ್ಟವಾಗುತ್ತದೆ

ಇವರಲ್ಲಿ ಕೃಷ್ಣಪ್ಪನವರು ತಮ್ಮನ್ನು ಅಪ್ಪಟ ಅಂಬೇಡ್ಕರ್‌ವಾದಿ ಎಂದು ಗುರುತಿಸಿಕೊಂಡರಾದರೂ, ಅವರ ಲೋಹಿಯಾ ಅಭಿಮಾನಕ್ಕೇನೂ ಚ್ಯುತಿಯುಂಟಾಗಿರಲಿಲ್ಲ. ಇನ್ನು ಮಹಾದೇವ ಅವರನ್ನು ದಲಿತ ಚಳವಳಿಯೊಳಗಡೆಯೇ ಲೋಹಿಯಾವಾದಿ ಎಂದು ಗುರುತಿಸಿ/ಅನುಮಾನಿಸಲಾಗುತ್ತಿತ್ತು ! ಈ ನಿರ್ದಿಷ್ಟ ಮತ್ತು ಸಂಕೀರ್ಣ ಚಾರಿತ್ರಿಕ ಕಾರಣಗಳ ಜೊತೆಗೇ ಹಲವು ತಾತ್ವಿಕ ಕಾರಣಗಳೂ ಮತ್ತು ಅವು ಹುಟ್ಟುಹಾಕಿದ ರಾಜಕೀಯ ಸಂದರ್ಭಗಳೂ ಇದರ ಹಿಂದೆ ಇವೆ. (ಇದರ ವಿವರಗಳಿಗಾಗಿ ನನ್ನ 'ಸಮಾಜವಾದಿ ಸಂಕಥನ'ಗಳ ಸಂಪುಟಗಳಲ್ಲಿನ ಲೇಖನಗಳನ್ನು ಗಮನಿಸಬಹುದು). ನನ್ನ ಮುಂದಿನ ಮಾತುಗಳಲ್ಲಿ ನಿಮಗೆ ಇದು ಸ್ಪಷ್ಟವಾಗುತ್ತಾ ಹೋಗ್ತದೆ ಅಂತ ನಾನು ಭಾವಿಸಿದ್ದೇನೆ.

ಗೊಂದಲಕ್ಕೆ ಅಂಬೇಡ್ಕರ್ ಚಿಂತನೆ

ಇರಲಿ, ಅದಕ್ಕಿಂತ ಮುಂಚೆ ಇವತ್ತು ಅಂಬೇಡ್ಕರ್ ಬಗ್ಗೆ ಮಾತನಾಡಬೇಕಾದ್ರೆ ಸ್ವಲ್ಪ ಕಸಿವಿಸಿ, ಗೊಂದಲ ಮತ್ತು ಆತಂಕ ಕೂಡ ಉಂಟಾಗುತ್ತೆ ಎಂಬುದನ್ನು ಸ್ಪಷ್ಟವಾಗಿ ಹೇಳಿಯೇ ಇಲ್ಲಿ ಮುಂದುವರಿಯುವ ಅಗತ್ಯ ಇದೆ. ಅದನ್ನು ಅಂಬೇಡ್ಕರ್‌ವಾದದ ವಿದ್ವಾಂಸರು ಅಂತ ಇವೊತ್ತು ನಾವೇನು ಕರೀತೀವಿ, ಆ ಆನಂದ ತೇಲ್ತುಂಬ್ಡೆ ಅವರು- ಗೊತ್ತಿರಬೇಕು ನಿಮಗೆಲ್ಲ, ಅವರು ಪ್ರಕಾಶ್ ಅಂಬೇಡ್ಕರ್‌ರವರ ಅಳಿಯ. ಅಂದರೆ ಅಂಬೇಡ್ಕರ್‌ಗೆ ತುಂಬಾ ಹತ್ತಿರದ ಸಂಬಂಧಿಯಾದವರು- ಅವರು ಹೇಳ್ತಾರೆ; ಇವತ್ತು ಅಂಬೇಡ್ಕರ್ ಚಿಂತನೆ ತುಂಬಾ ಗೊಂದಲಕ್ಕೆ ಸಿಕ್ಕಿದೆ ಅಂತ.

ಆಂತರಿಕವಾಗಿ ಮಸುಕು

ವಿವಿಧ ವಿಷಯಗಳ ಬಗೆಗೆ ಅಂಬೇಡ್ಕರ್ ತಳೆದ ನಿಲುವುಗಳು ಸ್ಫುಟವಾಗಿ ದಾಖಲಾಗಿವೆ ನಿಜ. ಆದರೆ ಅವರು ತಮ್ಮ ಬದುಕಿನ ಘಟ್ಟಗಳಲ್ಲಿ ತಾವು ತೆಗೆದುಕೊಂಡ ನಿಲುವು ಮತ್ತು ತೀರ್ಮಾನಗಳ ಬಗ್ಗೆ ನಂತರದ ದಿನಗಳಲ್ಲಿ ಆಡಿದ ಮಾತುಗಳನ್ನು ನೋಡಿದರೆ ಅಂಬೇಡ್ಕರ್ ಚಿತ್ರ ಆಂತರಿಕವಾಗಿ ಮಸುಕಾಗಿದೆ, ಅಂದರೆ ಅಸ್ಪಷ್ಟವಾಗಿದೆ ಅಂತ ಅವರು ಹೇಳ್ತಾರೆ. ಯಾತಕ್ಕೆ ಅಂತಂದ್ರೆ ತುಂಬಾ ಭಿನ್ನ ವಿಭಿನ್ನವಾದ ಅಂಬೇಡ್ಕರ್ ಚಿತ್ರಗಳು, ಸಿನಿಮಾಗಳು, ಕಿರುತೆರೆಯ ಕಥಾನಕಗಳು, ಕ್ಯಾಲೆಂಡರ್‌ಗಳ, ಗಾನಮೇಳಗಳು ಇವೆಲ್ಲವೂ ಎಂಥಾ ದೊಡ್ಡ ಸಂತೆಯನ್ನು ನಿರ್ಮಾಣ ಮಾಡಿವೆ ಅಂತಂದ್ರೆ, ಇದರಲ್ಲಿ ಯಾರು ನಿಜವಾದ ಅಂಬೇಡ್ಕರ್, ಯಾವ ಅಂಬೇಡ್ಕರ್‌ರನ್ನು ನಾವು ಆಯ್ಕೆ ಮಾಡಬೇಕು ಅನ್ನೋ ಗೊಂದಲ ಉಂಟಾಗ್ತಾ ಇದೆ ಅಂತ ತೇಲ್ತುಂಬ್ಡೆ ಹೇಳ್ತಾರೆ ಮತ್ತು ಅಂಬೇಡ್ಕರ್ ಬಗ್ಗೆ ಮಾತಾಡ್ಬೇಕಾದರೆ ಸ್ವಲ್ಪ ದೈಹಿಕ ಎಚ್ಚರಿಕೆಯಿಂದ ಮಾತಾಡ್ಬೇಕಾದಂತಹ ಪ್ರಸಂಗ ಕೂಡ ಉಂಟಾಗಿದೆ ಇವತ್ತು. ಅದು ಕಳೆದ ಎರಡು ಮೂರು ದಶಕಗಳಲ್ಲಿ ಅಂಬೇಡ್ಕರ್ ಸುತ್ತ ಕಟ್ಟಲಾಗಿರುವ 'ಧಾರ್ಮಿಕ' ಎನ್ನಬಹುದಾದ ಪ್ರಭಾವಳಿ ಮತ್ತು ಅಂತಹ ಪ್ರಭಾವಳಿ ಹೇರುವ ವಿಧಿ ನಿಷೇಧಗಳ ರಾಜಕಾರಣವನ್ನು ನೋಡ್ತಾ ಬಂದ್ರೆ ಗೊತ್ತಾಗ್ತದೆ ಅದು.

ಪರಿಪ್ರೇಕ್ಷ್ಯದ ಸಂಗತಿ

ಲೋಹಿಯಾ ಮತ್ತು ಅಂಬೇಡ್ಕರ್ ನಡುವಣ ಒಂದು ತೌಲನಿಕ ವಿವೇಚನೆ ಮಾಡ್ಬೇಕಾದರೆ ಕೆಲವು ಆಧಾರ ಸಂಗತಿಗಳನ್ನು ನಾವು ಮೊದಲು ಗಮನಿಸಬೇಕಾಗುತ್ತದೆ. ಅವು ಇವರ ತೌಲನಿಕ ಅಧ್ಯಯನಕ್ಕೆ ಒಂದು ಪರಿಪ್ರೇಕ್ಷ್ಯವನ್ನು ಒದಗಿಸುವಂತಹ ಕೆಲವು ಸಂಗತಿಗಳನ್ನು ಒಳಗೊಂಡಿದೆ. *(-ಸಶೇಷ)*